ಮಾಡಿ ಸ್ಟೇಟ್ ವೈಡ್ ಜ್ಯೂರಿಸ್ಡಿಕ್ಷನ್ ನೀಡಿತ್ತು. ಇದಕ್ಕೆ ಕಾರಣ, ತರಬೇತಿ ಕಾಲದಲ್ಲಿಯೇ ಅವರು ತೋರಿದ ಧೈರ್ಯ ಮತ್ತು ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಒಬ್ಬಂಟಿಯಾಗಿ ಐದು ಮಂದಿ ನಕ್ಸಲರನ್ನು ಸೆರೆ ಹಿಡಿದಿದ್ದು. ಆ ಸಮಯದಲ್ಲಿ ರಾಜ್ಯದಲ್ಲಿ ಎಲ್ಲೇ ನಕ್ಸಲ್ ಚಟುವಟಿಕೆಗಳು ಕಾಣಿಸಿಕೊಂಡರೂ ಅಲ್ಲಿ ರಂಗರಾವ್ ಹಾಜರಿರುತ್ತಿದ್ದರು. ರಂಗರಾವ್ ನಕ್ಸಲ್ ಕೂಂಬಿಂಗ್ ಸ್ಪೆಷಲಿಸ್ಟ್ ಎನ್ನಿಸಿದ್ದರು. ರಂಗರಾವ್ ಹೆಸರು ಕೇಳಿದರೆ ಸಾಕು ನಕ್ಸಲರ ಎದೆಗಳಲ್ಲಿ ನಡುಕ ಹುಟ್ಟುತ್ತಿತ್ತು. ಆ ಕಾಲಘಟ್ಟದಲ್ಲಿ ನಡೆದ ಅನೇಕ ಘಟನೆಗಳು ರಂಗರಾವ್‌ರನ್ನು ಈಗಲೂ ಕಾಡುತ್ತಲೇ ಇರುತ್ತವೆ. ಇಂದೂ ಕೂಡಾ ಆ ಘಟನೆ ನೆನಪಾಗಿ ಹೃದಯ ಭಾರವಾಗಿತ್ತು.

ಅಷ್ಟರಲ್ಲಿ ಆರ್ಡರ್ಲಿ ಭೀಮರಾಜು ಬಂದು ನಿಂತು 'ಅಯ್ಯಾ, ನಿಜಾಮುದ್ದೀನ್ ಎಕ್ಸ್‌ಪ್ರೆಸ್ ಹೋಗಿ ಕಾಲು ಗಂಟೆಯಾಯ್ತು. ಊಟವಾದ ಮೇಲೆ ಬೇಕಾದರೆ ಕೂತು ಆಕಾಶ ನೋಡಿ. ಇವೊತ್ತು ಅಮಾವಾಸ್ಯೆ. ಚಂದ್ರನಿಲ್ಲದ ಕಾರಣ ನಕ್ಷತ್ರಗಳು ಚೆನ್ನಾಗಿ ಕಾಣುತ್ತವೆ' ಎಂದಿದ್ದ. ರಾತ್ರಿ ಹತ್ತು ಗಂಟೆಗೆ ಅನತಿ ದೂರದಲ್ಲಿ ಶಿಳ್ಳೆ ಹಾಕಿಕೊಂಡು ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲು ಹಾದು ಹೋಗುವ ಮೊದಲೇ ರಂಗರಾವ್‌ದು ಪ್ರತಿನಿತ್ಯ ಊಟ ಮುಗಿದಿರುತ್ತದೆ. ಹಾಗಾಗಿ ಭೀಮರಾಜು ಬಂದು ಸೌಮ್ಯವಾಗಿ ಎಚ್ಚರಿಸಿದ್ದ. ಸಂದರ್ಭಕ್ಕನುಗುಣವಾಗಿ ಮಾತನಾಡುವ ಕೌಶಲ್ಯ ಕೂಡಾ ಭೀಮರಾಜುಗೆ ಕರಗತವಾಗಿತ್ತು.



ಗ್ಲಾಸಿನ ತಳದಲ್ಲಿ ಉಳಿದಿದ್ದ. ಎರಡು ಗುಕ್ಕು ವಿಸ್ಕಿಯನ್ನು ಒಂದೇ ಬಾರಿಗೆ ಗುಟುಕರಿಸಿ ಮನೆಯ ಕಡೆ ಹೆಜ್ಜೆ ಹಾಕಿದ್ದರು. ಸಿಂಕ್‌ನಲ್ಲಿ ಕೈ ತೊಳೆದು ಡೈನಿಂಗ್ ಟೇಬಲ್‌ಗೆ ಬಂದು ಕುಳಿತಿದ್ದರು. ಬಿಸಿಬಿಸಿ ಅನ್ನ, ತರಕಾರಿ ಸಾರು, ಹಾಗಲಕಾಯಿ ಪಲ್ಯ, ಮೊಟ್ಟೆ ಎಲ್ಲವನ್ನೂ ದೊಡ್ಡದಾದ ತಟ್ಟೆಯಲ್ಲಿ ತುಂಬಿಕೊಂಡು ಬಂದು ಭೀಮರಾಜು, ರಂಗರಾವ್ ಮುಂದೆ ಇಟ್ಟಿದ್ದ. ತಾವು ಜೈಲಿನ ಅಧಿಕಾರ ವಹಿಸಿಕೊಂಡ ಮಾರನೆಯ ದಿನವೇ ರಂಗರಾವ್ ಕೈದಿಗಳ ಡೈನಿಂಗ್ ಹಾಲ್‌ಗೆ ಹೋಗಿದ್ದರು. ಕೈದಿಗಳ ಕೈಯಲ್ಲಿ ಚಿಕ್ಕ ಚಿಕ್ಕ ತಟ್ಟೆಗಳಿದ್ದವು. ಕೆಲವರ ತಟ್ಟೆಗಳಿಂದ ಸ್ವಲ್ಪ ಸ್ವಲ್ಪ ಅನ್ನ, ಸಾರು ಚೆಲ್ಲುತ್ತಿತ್ತು ಕೂಡಾ. ಎರಡೇ ದಿನದಲ್ಲಿ ಚಿಕ್ಕ ತಟ್ಟೆಗಳು ಹೋಗಿ ಅಗಲದಾದ ದೊಡ್ಡ ತಟ್ಟೆಗಳು ಕೈದಿಗಳ ಕೈಗೆ ಬಂದಿದ್ದವು. ಅಂಥದ್ದೇ ಅಗಲವಾದ ತಟ್ಟೆಯಲ್ಲಿ ರಂಗರಾವ್ ಸಹ ಊಟ ಮಾಡುತ್ತಿದ್ದದ್ದು. ಆ ಸಮಯಕ್ಕೆ ಜೈಲರ್ ತೋಮಲಪಲ್ಲಿ ರಾಮರಾಜು ಬಂದು ಸೆಲ್ಯೂಟ್ ಹೊಡೆದು ನಿಂತಿದ್ದರು. ರಾಮರಾಜು ನಲವತ್ತು ವರ್ಷ ವಯಸ್ಸಿನ ಯಂಗ್ ಆಫೀಸರ್. ರಂಗರಾವ್‌ರ ಅಪೇಕ್ಷೆಗೆ ತಕ್ಕಂತೆ ಜೈಲಿನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಅಣ್ಣ ವೆಸ್ಟ್ ಗೋದಾವರಿ ಜಿಲ್ಲೆಯಲ್ಲಿ ಪಿಎಸ್‌ಐ ಆಗಿದ್ದರು. ಹನ್ನೆರಡು ವರ್ಷಗಳ ಹಿಂದೆ ನಕ್ಸಲ್ ಎನ್‌ಕೌಂಟರ್‌ನಲ್ಲಿ ಪ್ರಾಣ ಕಳೆದುಕೊಂಡಿದ್ದರು. ಹಾಗಾಗಿ ಅವರ ಅತ್ತಿಗೆಗೆ ಹೈದರಾಬಾದ್ ಪೊಲೀಸ್ ಕಮಿಷನರ್ ಆಫೀಸ್‌ನಲ್ಲಿ ಎಫ್‌ಡಿಎ ಕೆಲಸ ಕೊಟ್ಟಿದ್ದರು. ರಾಮರಾಜು ನಕ್ಸಲರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಪೊಲೀಸ್ ಇಲಾಖೆಯನ್ನು ಸೇರಲು ಬಹಳ ಪ್ರಯತ್ನ ಪಟ್ಟಿದ್ದರು. ಆದರೆ ಆ ಪ್ರಯತ್ನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗಿರಲಿಲ್ಲ.

ರಂಗರಾವ್, ರಾಮರಾಜುವನ್ನು ಕಂಡು 'ಬನ್ನಿ ಕುಳಿತುಕೊಳ್ಳಿ ರಾಮರಾಜು. ಏನಾದರೂ ಸ್ವಲ್ಪ ತಗೋತೀರಾ...' ಎಂದು ನಕ್ಕಿದ್ದರು. .... 'ಇಲ್ಲ ಸರ್ ನನ್ನದು ಊಟ ಆಯ್ತು' ಎಂದಿದ್ದರು. ರಂಗರಾವ್ ಅವರಿಂದ ಪ್ರಭಾವಿತರಾಗಿ ರಾಮರಾಜು ಕೂಡಾ ಜೈಲಿನಲ್ಲಿ ಕೈದಿಗಳಿಗೆ ಕೊಡುವ ಊಟವನ್ನೇ ಮಾಡುತ್ತಿದ್ದರು. ಅಡುಗೆ ಮಾಡಿದ ಕೂಡಲೇ ಜೈಲರ್ ಮೊದಲು ರುಚಿ ನೋಡಿ ಪರೀಕ್ಷಿಸಿದ ನಂತರವೇ ಕೈದಿಗಳಿಗೆ ಊಟ ಬಡಿಸುವುದು. ಇದು ದೇಶದ ಎಲ್ಲಾ ಜೈಲುಗಳಲ್ಲೂ ರೂಢಿಯಿರುವ ಪರಿಪಾಠ. 'ಹೇಳಿ. ಏನು ಸಮಾಚಾರ?' ಊಟ ಮಾಡುತ್ತಲೇ ಮಾತನಾಡುವುದು ರಂಗರಾವ್‌ಗೆ ಪ್ರಾಕ್ಟೀಸ್ ಆಗಿದೆ. 'ಸರ್. ಗದ್ದರ್ ಅರ್ಧ ಗಂಟೆಯ ಹಿಂದೆ ಸತ್ತು ಹೋದನಂತೆ...' ಖುಷಿಯಿತ್ತು ರಾಮರಾಜುರವರ ಧ್ವನಿಯಲ್ಲಿ. ಒಮ್ಮೆಲೇ ರಂಗರಾವ್‌ರ ಮೈಮನಗಳಲ್ಲಿ ಸಂಭ್ರಮ ಸಂಕಟಗಳೆರಡೂ ಪ್ರವಹಿಸಿದಂತೆ ಭಾಸವಾಗಿತ್ತು. 'ಇತ್ತೀಚೆಗೆ ಗದ್ದರ್ ಮೆತ್ತಗಾಗಿದ್ದರು.